ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ಜಿಲ್ಲೆ
ಮೈಸೂರು

ಸಂಖ್ಯೆ ಅನು(೧) ೩೪೨೮/ಖಾ.ಶಿ.ಸಂ/೨೭೩/೦೮-೦೯ ದಿನಾಂಕ: ೨೨-೧೦-೨೦೦೯

-: ಸಾರ್ವಜನಿಕ ಪ್ರಕಟಣೆ :-

ವಿಷಯ: ಜಿಲ್ಲೆಯಲ್ಲಿರುವ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ೨೦೦೯-೧೦ ನೇ ಸಾಲಿಗೆ ವಸೂಲಿ ಮಾಡಿರುವ ಶುಲ್ಕ.ವಂತಿಗೆ ಮತ್ತು ಮಕ್ಕಳ ದಾಖಲಾತಿಯಲ್ಲಿ ಮೀಸಲಾತಿ ನಿಯಮವನ್ನು ಅನುಸರಿಸಿರುವ ಬಗ್ಗೆ

ಉಲ್ಲೇಖ: ದಿನಾಂಕ: ೦೭-೦೯-೨೦೦೯ ರಂದು ನಡೆದ ಮೈಸೂರು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರದ ನಡವಳಿಗಳು

************

ಜಿಲ್ಲೆಯಲ್ಲಿರುವ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ೨೦೦೯-೧೦ ನೇ ಸಾಲಿನ ಶುಲ್ಕ, ವಂತಿಗೆ ವಸೂಲಿ ಮಾಡಿರುವ ಬಗ್ಗೆ ಮತ್ತು ಮಕ್ಕಳ ದಾಖಲಾತಿಯಲ್ಲಿ ಮೀಸಲಾತಿ ನಿಯಮಗಳನ್ನು ಅನುಸರಿಸಿರುವ ಬಗ್ಗೆ ಆಡಳಿತ ಮಂಡಳಿಗಳು ಸಲ್ಲಿಸಿರುವ ಮಾಹಿತಿಯನ್ನು ಯಥಾವತ್ತಾಗಿ ಜಿಲ್ಲಾ ಪಂಚಾಯಿತಿಯ ವೆಬ್ ಸೈಟಿನಲ್ಲಿ ಬಿಡುಗಡೆ ಮಾಡಿ ಪೋಷಕರು ಮತ್ತು ಸಾರ್ವಜನಿಕರಿಂದ ಈ ಬಗ್ಗೆ ಆಕ್ಷೇಪಣೆಗಳನ್ನು ಸ್ವೀಕರಿಸುವುದೆಂದು ದಿನಾಂಕ: ೦೭-೦೯-೨೦೦೯ ರಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಮೈಸುರು ರವರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನವಾಗಿರುತ್ತದೆ.

ಅದರಂತೆ ಈ ಬಗ್ಗೆ ಸಂಸ್ಥೆಗಳು ಸಲ್ಲಿಸಿರುವ ಮಾಹಿತಿಯನ್ನು ವೆಬ್ ಸೈಟಿನಲ್ಲಿ ಬಿಡುಗಡೆ ಮಾಡಿದ್ದು ಈ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಪೋಷಕರು ಮತ್ತು ಸಾರ್ವಜನಿಕರು ದಿನಾಂಕ: ---------- ರ ಒಳಗೆ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸುರು ಜಿಲ್ಲೆ ಮೈಸೂರು ೭ ಎನ್ ಆರ್ ಮೊಹಲ್ಲಾ ರವರಿಗೆ, ಸಲ್ಲಿಸಲು ಕೋರಿದೆ.

ಸದಸ್ಯ ಕಾರ್ಯದರ್ಶಿಗಳು ಹಾಗೂ

ಪದನಿಮಿತ್ತ ಉಪನಿರ್ದೇಶಕರು,
ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಮೈಸೂರು ಜಿಲ್ಲೆ ಮೈಸೂರು